**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ**,** ತುಮಕೂರು

**LAC.No. 101/2024**

ಪಿ.ಡಬ್ಲ್ಯೂ**. 1**

ದಿನಾಂಕಃ **13.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದ

**Ex.P.14** ಫೋಟೋ ಮತ್ತು ಸಹಿ ದೃಡೀಕರಣ

**Ex.P.15** ಭೂ ಪರಿಹಾರ ಹಣ ಸಂದಾಯದ ರಸೀದಿ

**Ex.P.16** ಅರ್ಜಿದಾರರು ನೀಡಿರುವ ಮನವಿ ಪತ್ರ

**Ex.P.17** ಲೋಕೋಪಯೋಗಿ ಇಲಾಖೆಯವರು ವಿತರಿಸಿರುವ ಅರ್ಜಿ ಸ್ವತ್ತು ಪಟ್ಟಪಂಚಾಯತಿಯಿಂದ ಇರುವ ದೂರ

**Ex.P.18** ಶುದ್ದ ಕ್ರಯಪತ್ರ ದಿ **23-02-15**

**Ex.P.19** ದಿ **18-03-17** ಶುದ್ದ ಕ್ರಯಪತ್ರ

**Ex.P.20** **LAC 124/22 dated 08-04-2025** ರ ಆದೇಶದ ಪ್ರತಿ

**Ex.P.21** **LAC 152/18** ರ ಆದೇಶದ ಪ್ರತಿ

ಪಾಟೀ ಸವಾಲು **2** ನೇ ಎದುರುದಾರರ ಪರ ಶ್ರೀ ಹೆಚ್ ಎಸ್ ಆರ್ ವಕೀಲರಿಂದಃ**-**

ನಾನು ಹೆಚ್ಚಿನ ಪರಿಹಾರವನ್ನು ಕೋರಿ ಭೂ ಸ್ವಾಧೀನಾಧಿಕಾರಿಗಳಿಗೆ ಕಾಲಪರಿಮಿತಿಯೊಳಗೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ಸರ್ವೆ ನಂ. **34** ಅರ್ಜಿ ಸ್ವತ್ತು ನೀರಾವರಿವುಳ್ಳದ್ದು ಆಗಿರುತ್ತದೆ. ಸದರಿ ಜಮೀನಿನಿಂದ ವಾರ್ಷಿಕ **5** ಲಕ್ಷ ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಕಂಬದ ಹಳ್ಳಿ ಕೊರಟಗೆರೆ ಪಟ್ಟಣ ಪಂಚಾಯತಿಯಿಂದ **5** ಕಿಮೀ ಗಿಂತ ಹೆಚ್ಚು ದೂರ ಇರುತ್ತದೆ ಅಂದರೆ ಸರಿಯಲ್ಲ. ಅರ್ಜಿ ಸ್ವತ್ತು ರಾಜ್ಯ ಹೆದ್ದಾರಿಗೆ ಹೊಂದಿಕೊಂಡಂತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ . ಭೂ ಸ್ವಾಧೀನ ಒಳಪಟ್ಟ ಕಾಲಕ್ಕೆ ನನ್ನ ಜಮೀನು **1** ಗುಂಟೆಗೆ **1** ಲಕ್ಷ ದಂತೆ **1** ಎಕರೆಗೆ **40** ಲಕ್ಷ ಬೆಲೆ ಬಾಳುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ರೈಲ್ವೆ , ಕೃಷಿ , ತೋಟಗಾರಿಕೆ , ಅರಣ್ಯ , ಉಪನೋಂದಾಣಾಧಿಕಾರಿ, ಕಂದಾಯ ಹಾಗೂ ಇತೆ ಎಲ್ಲಾ ಇಲಾಖೆಗಳು ಸ್ಥಳಕ್ಕೆ ಭೇಟಿ ಸ್ಥಳ ತನಿಖೆ ಮಾಡಿ ವೈಜ್ಞಾನಿಕವಾಗಿ ಪರಿಹಾರವನ್ನು ವಿತರಿಸಿರುತ್ತಾರೆ ಅಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವಷ್ಟು ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಎದುರುದಾರರು ಅತಿ ಹೆಚ್ಚು ಪರಿಹಾರವನ್ನು ನೀಡಿದ್ದರು ಸಹ ಹೆಚ್ಚಿನ ಪರಿಹಾರವನ್ನು ಪಡೆಯಲು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲು **1** ನೇ ಎದುರುದಾರರ ಪರ ಶ್ರೀ ಡಿ ಜಿ ಪಿ ವಕೀಲರಿಂದಃ**-**</u>

**1** ನೇ ಎದುರುದಾರರು ಪಾಟೀ ಸವಾಲು ಮಾಡಲು ಸಮಯವಕಾಶವನ್ನು ಕೋರಿರುವುದರಿಂದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು**.**

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು